[ Govt. of Karnataka C.R.P. 67]

| |
|---|
| **Deposition Sheets (RP.No.57) Form No.4** |

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 536/2024**

ಪಿಡ್ಬ್ಲೂಃ 3 ಸಿಡ್ಬ್ಲೂಃ 2

ಸಾಕ್ಷಿದಾರಳ ಹೆಸರು : ನಂದಿತಾ
ತಂದೆಯ ಹೆಸರು : ಶಶಿಕಾಂತ್
ಪ್ರಾಯ : 14 ವರ್ಷ
ಉದ್ಯೋಗ : ವಿದ್ಯಾರ್ಥಿ
ವಾಸ : ಹಾರವಾಢ

ಸಾಕ್ಷಿಯು ಬಾಲ ಸಾಕ್ಷಿಯಾಗಿದ್ದರಿಂದ ಸಾಕ್ಷಿಗೆ ಸಾಮಾನ್ಯ ಪ್ರಶ್ನೆಗಳನ್ನು ಕೇಳಲಾಗಿ ಸಾಕ್ಷಿಯು ಸರಿಯಾಗಿ ಉತ್ತರಿಸಿದ್ದರಿಂದ ಸಾಕ್ಷಿಯ ಹೇಳಿಕೆ ನೀಡಲು ಅರ್ಹನಿರುತ್ತಾನೆ ಎಂದು ಪರಿಗಣಿಸಿ ಅವರ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು.

ದಿನಾಂಕ 17.05.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ನಾನು ಪ್ರಯಾಣಿಸುತ್ತಿದ್ದ ಬಸ್ಸಿ ನ ಚಾಲಕನಾದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯು ಈ ದಿನ ನ್ಯಾಯಾಲಯದ ಮುಂದೆ ಗೈರು ಹಾಜರಿದ್ದು ಆರೋಪಿಯನ್ನು ಗುರುತಿಸುವ ಬಗ್ಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ಚಾಸಾ-1 ನನ್ನ ಶಾಲೆಯ ಶಿಕ್ಷಕರು. ಚಾಸಾ-3 ಮತ್ತು 4 ಸಹಪಾಠಿಗಳು, ಚಾಸಾ- 8 ರಿಂದ 11 ರವರ ಪರಿಚಯ ಇದೆ. ಚಾಸಾ-5 ರಿಂದ 7 ರವರ ಪರಿಚಯ ಇಲ್ಲ.

ದಿಃ19.12.2023 ರಂದು ಬೆಳಿಗ್ಗೆ 6.00 ಗಂಟೆಗೆ ನಾವು ನಮ್ಮ ಶಾಲೆಯ ಒಟ್ಟು 43 ಜನ ಹಾರವಾಢದಿಂದ ಉಡುಪಿ, ಮಣಿಪಾಲ, ಕಾರ್ಕಳ, ಹೊರನಾಡು, ಶೃಂಗೇರಿಗೆ ಪ್ರವಾಸಕ್ಕೆ

ಕೆ ಎಸ್ ಆರ್ ಟಿ ಸಿ ಬಸ್ಸಿನಲ್ಲಿ ಹೊರಟಿದ್ದೇವು. ನಾವು ಮಣಿ ಪಾಲ ಉಡುಪಿ ದೇವಸ್ಥಾನಗಳಿಗೆ ಹೋಗಿ ಉಡುಪಿಯಲ್ಲಿ ವಿಶ್ರಾಂತಿಪಡೆದಿದ್ದು ಮರುದಿನ ಕುದುರೆಮುಖ, ಹೊರನಾಡು ಶೃಂಗೇರಿ ಹೋಗಿದ್ದು ಅಲ್ಲಿಂದ ವಾಪಸ್ಸು ಬರುವಾಗ ಸುಮಾರು ಸಂಜೆ 5.15 ಗಂಟೆಗೆ ನಾವು ಹೋಗುತ್ತಿದ್ದ ಬಸ್ಸಿಗೆ ಅಪಘಾತವಾಗಿತ್ತು. ಸದ್ರಿ ಅಪಘಾತವು ಆರೋಪಿಯ ಅತೀವೇಗ ಹಾಗೂ ಅಜಾಗರೂಕತೆಯಿಂದ ಬಸ್ಸನ್ನು ಚಲಾಯಿಸಿ ಮರಕ್ಕೆ ಢಿಕ್ಕಿ ಹೊಡೆದಿರುವುದೇ ಕಾರಣ. ಸದ್ರಿ ಅಪಘಾತದ ಪರಿಣಾಮ ನನಗೆ ಮೂಗಿನ ಮೂಳೆ ಮುರಿದಿತ್ತು ಹಾಗೂ ಚಾಸಾ-3 ಮತ್ತು 4 ರವರಿಗೆ ಪೆಟ್ಟಾಗಿತ್ತು. ಅಲ್ಲಿಂದ ಚಾಸಾ-9 ರವರು ನಮ್ಮನ್ನು ರಿಕ್ಷಾದಿಂದ ಕಾರ್ಕಳ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದರು. ಅಲ್ಲಿ ಚಿಕಿತ್ಸೆಪಡೆದು ಬೇರೆ ಬಸ್ಸಿನಲ್ಲಿ ಹಾರವಾಢಕ್ಕೆ ಹೊರಟೆವು.

ನನ್ನನ್ನು ಪೊಲೀಸರು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುತ್ತಾರೆ. ನಿಪಿ-2 ರಿಂದ 5 ಭಾವಚಿತ್ರದಲ್ಲಿ ಇರುವ ಬಸ್ಸು ನಾವು ಆ ದಿನ ಪ್ರಯಾಣಿಸಿದ್ದು.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀ ಹೆಚ್ ಆರ್ ಕೆ ವಕೀಲರಿಂದಃ

ದಿಃ19.12.2023 ರಂದು ಆರೋಪಿಯು ನಾವು ಪ್ರಯಾಣಿಸುತ್ತಿದ್ದ ಬಸ್ಸನ್ನು ನಿಧಾನವಾಗಿ ಚಲಾಯಿಸುತ್ತಿದ್ದರು. ಮಾರನೆ ದಿನ ನಾವು ಕುದುರೆಮುಖ, ಹೊರನಾಡು, ಶೃಂಗೇರಿಗೆ ಪ್ರವಾಸಕ್ಕೆ ಹೊರಟಿದ್ದೇವು. ಸದ್ರಿ ದಾರಿಯು ಘಾಟಿ ಪ್ರದೇಶವಾಗಿದ್ದು ತಿರುವುಮುರುವು ರಸ್ತೆ ಆಗಿದೆ. ನಾನು ಆರೋಪಿಯ ಹಿಂಬದಿ ಸೀಟಿನಲ್ಲಿ ಕುಳಿತ್ತಿದ್ದೆ. ನನ್ನ ಜೊತೆ ಚಾಸಾ-3 ಮತ್ತು 4 ಕುಳಿತ್ತಿದ್ದರು.

ಆ ದಿನ ನಾವು ಬಸ್ಸಿನಲ್ಲಿ ಅಂತಕ್ಷರಿ ಮತ್ತು ಇತರೆ ಆಟಗಳನ್ನು ಆಡುತ್ತಾ ಪ್ರಯಾಣಿಸುತ್ತಿದ್ದೇವು. ನಾನು ಆರೋಪಿಯ ಹಿಂದಿನ ಸೀಟಿನಲ್ಲಿ ಕುಳಿತ್ತಿದ್ದರಿಂದ ಮುಂದಿನ ರಸ್ತೆ ಕಾಣುತ್ತಿರಲಿಲ್ಲ ಎಂದರೆ ಸರಿ. ನಾವು ಪ್ರಯಾಣಿಸುತ್ತಿದ್ದ ಬಸ್ಸು ಎಷ್ಟು ವೇಗದಲ್ಲಿ ಹೋಗುತ್ತಿತ್ತು ಎಂದು ಹೇಳಲು ಆಗುವುದಿಲ್ಲ. ಮಾಳ ಎಂಬ ರಸ್ತೆ ತಿರುವಿನಿಂದ ಮತ್ತು ಏರು ತಗ್ಗಿನ ರಸ್ತೆ. ಸ್ಥಳ ಮಹಜರು ಮಾಡುವ ವೇಳೆಯಲ್ಲಿ ಬರೆದಂತಹ ನಕ್ಷೆಯ ಪ್ರಕಾರ ಸದ್ರಿ ರಸ್ತೆ ಸಿಂಗಲ್ ರಸ್ತೆ.

ಅಪಘಾತವಾದ ನಂತರ ಆಸ್ಪತ್ರೆಯಲ್ಲಿ ಸಂಜೆ 6.30 ರಿಂದ ರಾತ್ರಿ 7.30 ಗಂಟೆಯವರೆಗೆ ನಾವು ಅಲ್ಲಿಯೇ ಇದ್ದೇವು. ದಿಃ20.12.2023 ರಂದು ರಾತ್ರಿ ಅಲ್ಲಿಂದ ಹೊರಟು ನಾವು ನಮ್ಮ

ಮನೆಯಾದ ಹಾರವಾಢಕ್ಕೆ ಮರುದಿನ ಬೆಳಗ್ಗಿನ ಜಾವ 2.00 ಗಂಟೆಗೆ ತಲುಪಿರುತ್ತೇವೆ. ನಾವು ಹಾರವಾಢಕ್ಕೆ ಹೋದ ನಂತರ ಮತ್ತೆ ಕಾರ್ಕಳ ಠಾಣೆಗೆ ಹಾಜರಾಗಿರುವುದಿಲ್ಲ. ಸದ್ರಿ ಅಪಘಾತದಿಂದ ನನಗೆ ಪೆಟ್ಟಾಗಿದ್ದು ವಾರ್ಷಿಕವಾಗಿ ನನ್ನ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿರುವುದಿಲ್ಲ. ಮುಂದುವರಿದ 1-2 ವಾರ ಶಾಲೆಗೆ ಹೋಗಿರುವುದಿಲ್ಲ. ಎದುರಿನಿಂದ ಒಂದು ಲಾರಿ ಅತೀವೇಗ ಹಾಗೂ ನಿರ್ಲಕ್ಷತನದಿಂದ ಬರುತ್ತಿದ್ದು ಅದು ಢಿಕ್ಕಿಪಡಿಸುವ ಕಾರಣ ಅದಕ್ಕೆ ಆರೋಪಿಯು ಅದನ್ನು ತಪ್ಪಿಸಲು ರಸ್ತೆಯಿಂದ ಮಣ್ಣಿನ ರಸ್ತೆಗೆ ಹೋಗಲು ಪ್ರಯತ್ನಿಸಿದರು ಎಂದರೆ ಸರಿ

ಆರೋಪಿಯು ನಮ್ಮನ್ನು ಪ್ರವಾಸಕ್ಕೆ ನಿಧಾನವಾಗಿ ಕರೆದುಕೊಂಡು ಹೋಗಿದ್ದಾರೆ ಎಂದರೆ ಸರಿಯಲ್ಲ. ಒಂದು ವೇಳೆ ಎದುರಿನಿಂದ ಲಾರಿ ಬಂದು ಢಿಕ್ಕಿಪಡಿಸಿದ್ದರೆ ನಮಗೆ ತೀವ್ರ ತರಹದ ರಕ್ತಗಾಯವಾಗಿ ಪೆಟ್ಟಾಗುತ್ತಿತ್ತು ಎಂದರೆ ಸರಿ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ